ನಾನು ಬೆಳಿಗ್ಗೆ 'ಕೊಡಗಿನ ಕಹಳೆ' ಪತ್ರಿಕೆಯಲ್ಲಿ ಕಣ್ಣಾಡಿಸುತ್ತಿದ್ದೆ. ಕಿಚನ್‌ನಲ್ಲಿ ಅಡ್ಡಂಡ ಕರಮಚಂದ ಚಹಾ ತಯಾರಿಯಲ್ಲಿದ್ದ. ಬದಲಾವಣೆಯಿರಲಿ ಅಂತ ಆತ ಆ ಕೆಲಸಕ್ಕೆ ತೊಡಗಿದ್ದ.

"ಇಲ್ಲೊಂದು ಸುದ್ದಿ ನೋಡ್ದಿಯಾ? ಕೊಡಗಿನಲ್ಲಿ ಕಿಡ್ನಿ ಮಾರಾಟ ದಂಧೆ ಸಕ್ರಿಯವಾಗಿದೆಯಂತೆ. ಕೆಲವು ಪ್ರತಿಷ್ಠಿತ ಖಾಸಗಿ ಆಸ್ಪತ್ರೆಗಳು ಷಾಮೀಲಾಗಿರುವ ಶಂಕೆಯಿದೆಯೆಂದು ವರದಿಯಾಗಿದೆ. ಆಸ್ಪತ್ರೆಗಳೀಗ ವ್ಯಾಪಾರ ಕೇಂದ್ರಗಳಾಗಿವೆ..."

"ಅದು ಹಳೇ ಸುದ್ದಿ, ಬಿದ್ದಪ್ಪ. ನೀನು 'ಮುಂಜಾನೆ' ಪತ್ರಿಕೆಯ ಐದನೆಯ ಪುಟದಲ್ಲಿರೋ ಜಾಹೀರಾತನ್ನು ನೋಡಿಲ್ಲ ಅಂತ ಕಾಣುತ್ತೆ! ಒಮ್ಮೆ ಓದು... ಬಹಳ ಕುತೂಹಲಕಾರಿಯಾಗಿದೆ..."

ನಮ್ಮಲ್ಲಿ ಸಾಧಾರಣ ಮಟ್ಟಿಗೆ ಎಲ್ಲಾ ಪತ್ರಿಕೆಗಳೂ ಬರುತ್ತವೆ. ನಮ್ಮ ವೃತ್ತಿಗೆ ನಾನಾ ಬಗೆಯ ಸುದ್ದಿಗಳು ಅಗತ್ಯವೆಂದು, ಕರಮಚಂದ ಎಲ್ಲಾ ಪತ್ರಿಕೆಗಳಿಗೂ ಚಂದಾದಾರನಾಗಿದ್ದ. 'ಮುಂಜಾನೆ' ಪತ್ರಿಕೆಯು ಬಹುಪಟ್ಟಿಗೆ ಪೀತ ಪತ್ರಿಕೆ ಅಂತಲೇ ಪ್ರಸಿದ್ಧವಾದ ಅಗ್ಗದ ಬೆಲೆಯ, ಅಪರಾಧ – ಗಾಸಿಪ್‌ಗಳಿಗೆ ಮೀಸಲಾಗಿದ್ದ ಪತ್ರಿಕೆ. ಅದರ ಓದುಗರು ಹೆಚ್ಚಾಗಿ ಸಮಾಜದ ಕೆಳಸ್ತರದ, ಕೇವಲ ರಂಜನೆ ಬಯಸುವ ಮಂದಿ. ನಾನು ಅದನ್ನೆತ್ತಿಕೊಂಡು, ಪುಟ ತಿರುಗಿಸಿದೆ. ಕಣ್ಣುಗಳು ಕೆಳಗಡೆ ಸರಿದವು. 'ಸಂಗಾತಿ ಬೇಕಾಗಿದ್ದಾರೆ' ಎನ್ನುವ ದಪ್ಪ ಅಕ್ಷರಗಳ ತಲೆಬರಹವಿದ್ದ ಜಾಹೀರಾತು.

"ದಿನಾ ಕುಡಿಯಲು ಒರು ಸಂಗಾತಿ ಬೇಕಾಗಿದೆ. ಟೈಮಿಂಗು: ಸಾಯಂಕಾಲ ಏಳರಿಂದ ಹನ್ನೊಂದರವರೆಗೆ. ಉಚಿತವಾಗಿ ಸಿಲೆಕ್ಟೆಡ್ ಬ್ರಾಂಡ್ ಡ್ರಿಂಕ್ಸ್. ಒರು ಷರತ್ತು: ಮಾತಾಡಿದ್ದನ್ನು ಕೇಳುವ ತಾಳ್ಮೆ ಇರುಕ್ಕು. ಸಂಭಾಷಣಂ ಕೇಳ್ದೇ ಇದ್ರೆ, ಕಾಂಟ್ರಾಕ್ಟ್ ಕ್ಯಾನ್ಸಲ್. ಸಂಪರ್ಕಿಸಿರಿ: ಏಡುಕೊಂಡಲು, ಬಾಳೇಕಾಡ್ ಎಸ್ಟೇಟ್, ನೇಟಿವ್ ಕ್ಲಬ್ ಎದುರು, ದೇವನಗಿರಿ, ವಿರಾಜಪೇಟೆ."

"ಇದೇನಪ್ಪ! ವಿಚಿತ್ರ ಜಾಹೀರಾತು! ಕುಡಿಯಲು ಕಂಪನಿ ಬೇಕಂತೆ!... ಇದನ್ನು ಕೊಟ್ಟವನ ಹೆಸರೂ ವಿಚಿತ್ರವಾಗಿದೆ."

"ಅದನ್ನ ನೋಡಿ ನಿನಗೇನಾದ್ರೂ ಊಹನೆ ಮಾಡಲಿಕ್ಕಾಗುತ್ತೋ?" ಕರಮಚಂದ ಪ್ರಶ್ನೆ ಒಗೆದ.

ನಾನು ಆ ಜಾಹೀರಾತಿನ ಮೇಲೆ ಮತ್ತೊಮ್ಮೆ ನಜರು ಹರಿಸಿ, ಏನೊಂದೂ ಹೊಳೆಯದೆ, ಲೊಚಗುಟ್ಟಿದೆ. ಕರಮಚಂದ ತನ್ನ ಊಹನೆ ಮಂಡಿಸಿದ,

"ಮೊದಲನೇದು ಆ ಜಾಹೀರಾತಿನಲ್ಲಿ ಬಳಸಿದ ಭಾಷೆ. ಅದರಲ್ಲಿ ಮಲಯಾಳೀ ಭಾಷೆಯ ಗಾಢ ಪ್ರಭಾವ ಇದೆ, ಉದಾಹರಣೆಗೆ ಟೈಮಿಂಗು, ಒರು, ಇರುಕ್ಕು ಇತ್ಯಾದಿ. ಇದರಿಂದ ಜಾಹೀರಾತುದಾರ ಮಲಯಾಳಿ ಅಥವಾ ಮಲಯಾಳಿ ಭಾಷೆಯಲ್ಲಿ ಹೆಚ್ಚು ವ್ಯವಹರಿಸುವವನು ಎಂದು ಅಂದುಕೊಳ್ಳಬಹುದು. ಪ್ರಾಯಶಃ ಅವ್ನು ಕುಟ್ಟ ಅಥವಾ ಅದರಾಚೆಗಿನವನಿರಬಹುದು. ಅವು ಕೇರಳಕ್ಕೆ ಸಮೀಪದ ಪ್ರದೇಶಗಳು. ಅಲ್ಲಿ ಮಲಯಾಳಿಯ ಬಳಕೆ ಜಾಸ್ತಿ. ಆ ಏಡುಕೊಂಡಲು ಮುದುಕನಾಗಿರೋ ಸಾಧ್ಯತೆ ಜಾಸ್ತಿ. ಯಾಕಂದ್ರೆ ಅವರಿಗಷ್ಟೇ ಮಾತನಾಡುವ ಚಪಲ ಇರೋದು. ಅವರ ಮಾತು ಕೇಳಲು ಮನೆಯವರಾರೂ ತಯಾರಿರೋಲ್ಲ. ಅದ್ಕೆ ಬಹುಶಃ ಆತ ಈ ದಾರಿ ಹಿಡಿದಿರಬೇಕು. ಉಚಿತವಾಗಿ ಕುಡಿಯಲು